ಸೂರ್ಯ ಚಂದ್ರ

ಸೂರ್ಯೋದಯ
ಏಪ್ರಿಲ್ 21: 6.4
ಸೂರ್ಯಾಸ್ತ
ಏಪ್ರಿಲ್ 20: 6.33

ಚಂದ್ರೋದಯ
ಏ. 20: ಬೆ. 11.33.
ಚಂದ್ರಾಸ್ತ
ಏ. 20: ರಾ. 10.17

ನಗರದ ಹವಾಮಾನ

ಗರಿಷ್ಠ ಉಷ್ಣಾಂಶ	35
ಕನಿಷ್ಠ ಉಷ್ಣಾಂಶ	22.2
ಮಳೆ	—.—

ಕಾಮಗಾರಿ

'ಟೆಂಡರ್ ಶ್ಯೂರ್' ಯೋಜನೆಯಡಿ ವಿಠ್ಠಲ ಮಲ್ಯ ರಸ್ತೆಯಲ್ಲಿ ಶನಿವಾರ ಕಾಮಗಾರಿ ಪ್ರಗತಿಯಲ್ಲಿರುವುದು ಕಂಡು ಬಂದಿತು

ಭೂಗಳ್ಳರ ದಾಹಕ್ಕೆ ಬಲಿಯಾದ ಕೆರೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿಯಲ್ಲಿರುವ ಚಿಕ್ಕ ಕಲ್ಲಸಂದ್ರದ ಆ 'ಆಟದ ಮೈದಾನ'ದಲ್ಲಿ ನಿತ್ಯ ಬ್ಯಾಟು–ಚೆಂಡು ಹಿಡಿದು ಬರುವ ಮಕ್ಕಳಿಗೆ ಮೊದಲು ಅಲ್ಲೊಂದು ಕೆರೆ ಇತ್ತು ಎಂಬುದೇ ತಿಳಿದಿಲ್ಲ. ಕೆರೆ ಅಂಗಳ ಮಕ್ಕಳ ಆಟಕ್ಕಾಗಿ ಮಾತ್ರ ಬಳಕೆ ಆಗುತ್ತಿಲ್ಲ. ಅಲ್ಲೊಂದಿಷ್ಟು ಗುಜರಿ ಅಂಗಡಿಗಳೂ ಎದ್ದಿವೆ. ಕಟ್ಟಡ ಸಾಮಗ್ರಿಗಳ ಮಾರಾಟದ ತಾಣವಾಗಿಯೂ ಆ ಜಾಗ ಬಳಕೆ ಆಗುತ್ತಿದೆ.

ಜಲಮೂಲಗಳ ಮೇಲೆ ಕಣ್ಣು ಹಾಕಿದ 'ತಿಮಿಂಗಿಲ'ಗಳಿಗೆ ಬಲಿಯಾದ ಕೆರೆಯೊಂದರ ಕಥೆ ಇದು. ಅಂದ ಹಾಗೆ ಚಿಕ್ಕ ಕಲ್ಲಸಂದ್ರ ಕೆರೆಗೆ ಮಾತ್ರ ಒದಗಿದ ದುರ್ಗತಿ ಇದಲ್ಲ. ಲೆಕ್ಕವಿಲ್ಲದಷ್ಟು ಕೆರೆಗಳು, ರಾಜಕಾಲುವೆಗಳು, ಗುಡ್ಡಗಳು, ಅರಣ್ಯ ಪ್ರದೇಶಗಳು, ಆಟದ ಮೈದಾನಗಳು, ಉದ್ಯಾನಗಳನ್ನು ಭೂಗಳ್ಳರು ತಮ್ಮ ದಾಹ ತಣಿಸಿಕೊಳ್ಳಲು ಆಪೋಶನ ತೆಗೆದುಕೊಂಡಿದ್ದಾರೆ.

ಗ್ರಾಮದ ದಾಖಲೆಗಳು ಚಿಕ್ಕ ಕಲ್ಲಸಂದ್ರದ ಕೆರೆ 13 ಎಕರೆ 20 ಗುಂಟೆಗಳಿಗೆ ವಿಸ್ತರಿಸಿತ್ತು ಎಂದು ಹೇಳುತ್ತವೆ. ಆದರೆ, ಆ ಜಾಗ ಈಗ ಬಂಜರು ಭೂಮಿ. ನೆಲಮಟ್ಟದಿಂದ ಎರಡು ಅಡಿಯಷ್ಟು ಎತ್ತರವಾಗಿದೆ. ಅಲ್ಲೊಂದು ಕೆರೆ ಇತ್ತು ಎನ್ನುವುದನ್ನೇ ನಂಬುವುದು ಕಷ್ಟವಾಗಿದೆ. ಅಲ್ಲಿದ್ದ ಕೆರೆಯಲ್ಲಿ ಈಜಾಡಿದ ಹಿರಿಯರು ಈಗಲೂ ಸಾಕ್ಷ್ಯ ಹೇಳಲು ಇದ್ದಾರೆ.

'ನಾನು ಈಜುವುದನ್ನು ಕಲಿತದ್ದೇ ಈ ಕೆರೆಯಲ್ಲಿ. ಪಕ್ಷಿ ಸಂಕುಲವೂ ಇಲ್ಲಿ ಹೆಚ್ಚಾಗಿತ್ತು. ಮೀನುಗಳು ಸಹ ಹೇರಳವಾಗಿದ್ದವು. ಗೌಡನಪಾಳ್ಯ ಕೆರೆಗೂ ಇಲ್ಲಿಂದ ನೈಸರ್ಗಿಕ ಸಂಪರ್ಕ ಕಾಲುವೆಯಿತ್ತು' ಎಂದು ಮುನಿಯಪ್ಪ ನೆನಪು ಮಾಡಿಕೊಳ್ಳುತ್ತಾರೆ.

'ಈಗ ಕೆರೆಯೂ ಇಲ್ಲ. ಕಾಲುವೆಯೂ ಇಲ್ಲ. ಎಲ್ಲವೂ ಮಾಯವಾಗಿದೆ. ಕಳೆದ 15 ವರ್ಷಗಳಲ್ಲಿ ನನ್ನ ಕಣ್ಣ ಮುಂದೆಯೇ ನಡೆದ ವಿದ್ಯಮಾನ ಇದು' ಎಂದು ಅವರು ಹೇಳುತ್ತಾರೆ.

ಪದ್ಮನಾಭನಗರದ (ಉತ್ತರಹಳ್ಳಿ ಇದೇ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ) ಶಾಸಕ ಆರ್. ಅಶೋಕ ಅವರ ಪ್ರಕಾರ, ಜಾಗದ ಸಂಬಂಧದ ವಿವಾದವೇ ಕೆರೆ ಅಭಿವೃದ್ಧಿಗೆ ಹಿನ್ನಡೆ. ಈ ಸಂಗತಿಯನ್ನು ಅವರು ಮತ್ತೆ ಮತ್ತೆ ಹೇಳುತ್ತಲೇ ಇದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಜಾಲತಾಣವನ್ನು ನೋಡಿದಾಗ ಕೆರೆ ಪಾತ್ರದಲ್ಲಿಯೇ ಹಲವು ವಸತಿ ಹಾಗೂ ವಾಣಿಜ್ಯ ಕಟ್ಟಡಗಳನ್ನು ತೋರಿಸುತ್ತಿದೆ.

ಕೆರೆ ಸಂರಕ್ಷಣೆ ಜವಾಬ್ದಾರಿ ಹೊತ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮಾತ್ರ ಅತಿಕ್ರಮಣ ತಡೆಯಲಾಗದೆ ಕೈಚೆಲ್ಲಿದೆ. 'ಕೆರೆ ಅಭಿವೃದ್ಧಿಗೆ ಯಾರೂ ಅವಕಾಶ ಮಾಡಿಕೊಡುತ್ತಿಲ್ಲ. ಈಗಾಗಲೇ ಕೆಲವು ಮನೆಗಳು ಅಲ್ಲಿ ನಿರ್ಮಾಣವಾಗಿದ್ದು, ಬರುವ ವರ್ಷಗಳಲ್ಲಿ ಇನ್ನಷ್ಟು ಮನೆಗಳು ನಿರ್ಮಾಣ ಆಗುವುದರಲ್ಲಿ ಸಂಶಯವಿಲ್ಲ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಹೇಳುತ್ತಾರೆ.

ಚಿಕ್ಕ ಕಲ್ಲಸಂದ್ರದಿಂದ ದೂರದಲ್ಲಿ ಕೆ.ಆರ್.ಪುರ ಮತ್ತು ಮಂಡೂರು ನಡುವೆ ರಾಂಪುರ ಕೆರೆ ಇದೆ. ವೈಟ್‌ಫೀಲ್ಡ್ ಹತ್ತಿರದ ಈ ಕೆರೆ 100 ಎಕರೆಗೆ ವ್ಯಾಪಿಸಿದೆ. ಕೆರೆ ಪಾತ್ರ ಕಿರಿದಾಗುತ್ತಿರುವ ವೇಗ ಕಂಡರೆ ಇನ್ನು ಕೆಲವೇ ತಿಂಗಳಲ್ಲಿ ಈ ಭಾಗದಲ್ಲಿ ಹೊಸ 'ಲೇಕ್‌ವ್ಯೂ ಅಪಾರ್ಟ್‌ಮೆಂಟ್'ಗಳು ತಲೆ ಎತ್ತುವುದರಲ್ಲಿ ಸಂಶಯವಿಲ್ಲ. ಇತ್ತ ಕಟ್ಟಡಗಳು ಮೇಲೆತ್ತಿದಂತೆ ಅತ್ತ ಕೆರೆ ಕಣ್ಮುಚ್ಚುತ್ತಾ ಹೋಗುತ್ತದೆ.

ನಗರದ ಘನತ್ಯಾಜ್ಯವನ್ನು ಮಂಡೂರಿಗೆ ಸಾಗಿಸುವ ಮಾರ್ಗದಲ್ಲೇ ಇದೆ ಈ ಕೆರೆ. ಕೆಲವು ಲಾರಿಗಳು ಕಟ್ಟಡ ತ್ಯಾಜ್ಯವನ್ನು ಇಲ್ಲಿಯೇ ಸುರಿದ ಬಗೆಗೆ ಪತ್ರಿಕಾ ವರದಿಗಳು ಬಂದಿದ್ದವು. ರಾಜ್ಯ ಹೈಕೋರ್ಟ್ ಈ ಸಂಬಂಧ ಮಾಹಿತಿ ಕೇಳಿತ್ತು. ಕೆರೆಗೆ ತ್ಯಾಜ್ಯ ಸುರಿಯದಂತೆ ಆದೇಶ ನೀಡಿತ್ತು. ಹೈಕೋರ್ಟ್‌ನ ಆದೇಶಕ್ಕೂ ಭೂಗಳ್ಳರು ಕೆರೆಗೆ ಮಣ್ಣು ಸುರಿಯುವುದನ್ನು ತಪ್ಪಿಸಲು ಆಗಿಲ್ಲ.

ಶ್ರೀರಾಂಪುರ ಕೆರೆ ಪಾತ್ರದಲ್ಲಿ ಮರಳು ತಂದು ಸುರಿಯಲಾಗಿದ್ದು, ಕೆರೆ ಅತಿಕ್ರಮಣಕ್ಕೆ ಮುನ್ನುಡಿ ಹಾಡಲಾಗಿದೆ

ಸುಬ್ರಹ್ಮಣ್ಯನಗರದ ಕೆರೆಯನ್ನೂ ನಿಧಾನವಾಗಿ ಅತಿಕ್ರಮಿಸಲಾಗುತ್ತಿದೆ

–ಪ್ರಜಾವಾಣಿ ಚಿತ್ರಗಳು

ಬೆಂಗಳೂರು ಕೆರೆಗಳ ಕುರಿತು...

- ಕೋರಮಂಗಲ – ಹೆಬ್ಬಾಳ ಕಣಿವೆ, ಚಳ್ಳಘಟ್ಟ ಕಣಿವೆ ಹಾಗೂ ವೃಷಭಾವತಿ ಕಣಿವೆಗಳೇ ನಗರದ ಕೆರೆಗಳಿಗೆ ಮೂಲವಾಗಿವೆ
- ಬೆಂಗಳೂರಿನ ಸುತ್ತಲಿನ ಪ್ರದೇಶದಲ್ಲಿ ಮೀನಾಗಾರಿಕೆ, ಕೃಷಿ ಮತ್ತಿತರ ಚಟುವಟಿಕೆಗಳು ಈ ಕೆರೆಗಳನ್ನೇ ಆಶ್ರಯಿಸಿವೆ
- 2009ರಲ್ಲಿ ನಡೆಸಿದ ಅಧ್ಯಯನದ ಪ್ರಕಾರ ನಗರದ ಅಂತರ್ಜಲ ಪಾತಾಳ ಕಂಡಿದ್ದು, ಅಪಾಯಕಾರಿ ಮಟ್ಟ ತಲುಪಿದೆ



ರಾಂಪುರ ಕೆರೆ ಅತಿಕ್ರಮಣದ ವಿರುದ್ಧ ಧ್ವನಿ ಎತ್ತಿದ ಎಸ್. ಆರ್. ಹಿರೇಮಠ

ಬೆಳ್ಳಂದೂರು ಕೆರೆ ದೃಶ್ಯ ಉಪಗ್ರಹದಿಂದ ಸೆರೆ ಹಿಡಿದಂತೆ... 2002 ಮತ್ತು 2013ರಲ್ಲಿ ತೆಗೆದ ಈ ಎರಡು ಚಿತ್ರಗಳು ಕೆರೆ ಅತಿಕ್ರಮಣ ಆಗಿರುವುದನ್ನು ಎತ್ತಿ ತೋರುತ್ತವೆ

ಎರಡು ದಶಕದಲ್ಲಿ ಕಣ್ಮರೆಯಾದ ಜಲಮೂಲ

ಬೆಂಗಳೂರು: 'ನಗರದ ಜಲಮೂಲಗಳ ಆಕಾರ, ಅವುಗಳು ರಚನೆಯಾದ ವಿಧವನ್ನು ನಾವು ಕಳೆದ 20 ವರ್ಷಗಳಿಂದ ಅಧ್ಯಯನ ಮಾಡುತ್ತಿದ್ದೇವೆ. ಪ್ರತಿಯೊಂದು ವಿವರವನ್ನೂ ನಕ್ಷೆಯಲ್ಲಿ ದಾಖಲಿಸುತ್ತಿದ್ದೇವೆ. ಕಳೆದ 2 ದಶಕಗಳಲ್ಲಿ ಜಲಮೂಲಗಳು ಭರದಿಂದ ಕಾಣೆಯಾಗಿದ್ದು ಎದ್ದು ಕಾಣುತ್ತಿದೆ'

–ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)ಯ ಪ್ರೊ. ರಾಮಚಂದ್ರ ಹೇಳುವ ಮಾತುಗಳಿವು. ಅವರ ತಂಡದ ಸಂಶೋಧನೆ ಪ್ರಕಾರ, ಬೆಂಗಳೂರಿನ ಪರಿಸರ ವ್ಯವಸ್ಥೆಯಲ್ಲಿದ್ದ ಸುಮಾರು 300 ಕೆರೆಗಳು ಹಾಗೂ ಜಲಮೂಲಗಳು ಕಾಣೆಯಾಗಿವೆ.

'ಸದ್ಯ ನಗರದಲ್ಲಿ 93 ಕೆರೆಗಳಿದ್ದು, ಮಳೆಗಾಲದಲ್ಲಿ ಮಾತ್ರ ಜೀವ ತಳೆಯುವ ಜಲಮೂಲಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಅವುಗಳ ಸಂಖ್ಯೆ 190ಕ್ಕೆ ಹೆಚ್ಚುತ್ತದೆ' ಎನ್ನುತ್ತಾರೆ ಅವರು.

'ಕೆರೆಗಳಿಗೂ ನೀರನ್ನು ಹೊಂದಿದ ಹಸಿ ಪ್ರದೇಶಗಳಿಗೂ ವ್ಯತ್ಯಾಸವಿದೆ. ಕೆರೆ ನೈಜ ಜಲಮೂಲವಾದರೆ ಅದರ ಸುತ್ತಲಿನ ತಗ್ಗಾದ ಪ್ರದೇಶ ನೀರನ್ನು ಒಡಲಲ್ಲಿ ಹೊಂದಿದ ಹಸಿ ತಾಣ. ಇಂತಹ ಪ್ರದೇಶದಲ್ಲಿ ಸಾಮಾನ್ಯವಾಗಿ ಹುಲ್ಲು ಬೆಳೆದಿರುತ್ತದೆ' ಎಂದು ಅವರು ವಿವರಿಸುತ್ತಾರೆ.

'1970–80ರ ದಶಕದಲ್ಲಿ ಎತ್ತ ನೋಡಿದರೂ ಹಸಿರೇ ಕಾಣುತ್ತಿತ್ತು. ಈಗ ನಗರದ ಚಿತ್ರಣವೇ ಬದಲಾಗಿದೆ' ಎಂದು ವಿಷಾದ ವ್ಯಕ್ತಪಡಿಸುತ್ತಾರೆ.

ಕೆರೆಗಳು ಕಣ್ಮರೆಯಾಗಲು ಏನು ಕಾರಣ? ಈ ಪ್ರಶ್ನೆಯನ್ನು ಪರಿಸರಶಾಸ್ತ್ರಜ್ಞರ ಮುಂದಿಟ್ಟರೆ ಅವರ ವಿಶ್ಲೇಷಣೆ ಹೀಗೆ ಸಾಗುತ್ತದೆ: 'ಭರದಿಂದ ಸಾಗಿರುವ ನಗರೀಕರಣವೇ ಕೆರೆಗಳ ಕಣ್ಮರೆಗೆ ಬಹುಮುಖ್ಯ ಕಾರಣ. ಕೆರೆಗಳಲ್ಲೇ ಹಲವು ಗಗನಚುಂಬಿ ಕಟ್ಟಡಗಳು ನಿರ್ಮಾಣವಾಗಿವೆ. ಕೆರೆ ಸುತ್ತಲಿನ ಹಸಿ ಪ್ರದೇಶವನ್ನು ಅತಿಕ್ರಮಿಸಲಾಗಿದ್ದು, ಕೆರೆಗಳ ಕತ್ತು ಹಿಸುಕಿದಂತಾಗಿದೆ!'

'ಕೆರೆ ಸುತ್ತಲಿನ ಹಸಿ ಪ್ರದೇಶಗಳನ್ನು ಸರ್ಕಾರದ ಭ್ರಷ್ಟ ವ್ಯವಸ್ಥೆ ಡಿನೋಟಿಫೈ ಮಾಡುವ ಮೂಲಕ ಬಿಲ್ಡರ್‌ಗಳಿಗೆ ಮಾರುತ್ತದೆ. ಕೆರೆಗಳನ್ನು ಉಳಿಸಬೇಕಾದರೆ ಇಂತಹ ಕಬಂಧಬಾಹುಗಳನ್ನು ಕತ್ತರಿಸಿ ಹಾಕಬೇಕು' ಎನ್ನುತ್ತಾರೆ ಅವರು.

'ಕೆರೆಗಳಿಗೆ ನಿಯಮಿತವಾಗಿ ಭೇಟಿ ಕೊಟ್ಟು ಅದರ ಪಾತ್ರಕ್ಕೆ ಯಾವುದೇ ಕುಂದು ಬಂದಿಲ್ಲ ಎಂಬುದನ್ನು ಯಾವ ಅಧಿಕಾರಿಯೂ ಪರಿಶೀಲಿಸುವ ಗೋಜಿಗೆ ಹೋಗುವುದಿಲ್ಲ' ಎಂದು ಮತ್ತೊಬ್ಬ ಸಂಶೋಧಕರು ಹೇಳುತ್ತಾರೆ.

'ಕೆರೆಗಳ ಅಭಿವೃದ್ಧಿಗಾಗಿಯೇ ಪ್ರಾಧಿಕಾರ ಇದೆ. ಆದರೆ, ಭೂಗಳ್ಳರಿಂದ ಕೆರೆ ಪಾತ್ರವನ್ನು ಸಂರಕ್ಷಿಸಲು ಅದು ಎಷ್ಟರ ಮಟ್ಟಿಗೆ ಕಾರ್ಯಪ್ರವೃತ್ತವಾಗಿದೆ' ಎಂಬ ಪ್ರಶ್ನೆಯನ್ನು ಅವರು ಹಾಕುತ್ತಾರೆ. 'ಭೂಮಾಫಿಯಾ ವಿರುದ್ಧ ಕ್ರಮ ಕೈಗೊಳ್ಳುವಷ್ಟು ಈ ಪ್ರಾಧಿಕಾರ ಸಶಕ್ತವಾಗಿದೆಯೇ' ಎಂದೂ ಕೇಳುತ್ತಾರೆ.

ಬೆಂಗಳೂರಿನ ಹಲವು ಭಾಗಗಳಲ್ಲಿ ಅಂತರ್ಜಲ ಬರಿದಾಗಿದೆ ಎಂಬ ಆತಂಕಕಾರಿ ಸಂಗತಿಯೂ ಸಂಶೋಧನೆಯಿಂದ ತಿಳಿದುಬಂದಿದೆ. ನಗರದ ಎಲ್ಲ ಭಾಗಗಳಿಗೆ ಕಾವೇರಿ ನೀರು ಸಿಗದಿರುವ ಕಾರಣ ಹಲವು ಪ್ರದೇಶಗಳು ಈಗಲೂ ಕೊಳವೆಬಾವಿಗಳ ನೀರನ್ನೇ ಆಶ್ರಯಿಸಿವೆ. ಇಂತಹ ಸನ್ನಿವೇಶದಲ್ಲಿ ಅಂತರ್ಜಲ ಭರದಿಂದ ಖಾಲಿ ಆಗುತ್ತಿರುವುದು ಕಳವಳ ತಂದಿದೆ.

'ನೀರಿನ ಬಳಕೆ ಕಾನೂನು ಜಾರಿಗೊಳಿಸುವ ಮೂಲಕ ಜಲ ಮರುಪೂರಣಕ್ಕೆ ಮುಂದಾಗುವುದು ಅತ್ಯಗತ್ಯವಾಗಿದೆ' ಎಂದು ಐಐಎಸ್‌ಸಿ ಸಂಶೋಧಕರು ಹೇಳುತ್ತಾರೆ. 'ಕಾವೇರಿಯೊಂದೇ ಈ ಭಾಗದ ಜಲಮೂಲವಾದ ಕಾರಣ ಅದರ ಮೇಲೆ ಅಧಿಕ ಹೊರೆಬಿದ್ದಿದೆ. ಅಷ್ಟು ಪ್ರಮಾಣದ ನೀರನ್ನು ಮುಂದಿನ ದಿನಗಳಲ್ಲಿ ಈ ನದಿ ಒಂದರಿಂದಲೇ ಪಡೆಯುವುದು ಅಸಾಧ್ಯ' ಎಂದು ವಿವರಿಸುತ್ತಾರೆ.

ಅಂತರ್ಜಲವನ್ನು ಹೆಚ್ಚಿಸಲು ತಿಪ್ಪಗೊಂಡನಹಳ್ಳಿ ಜಲಾಶಯದಂತಹ ಜಲಮೂಲಗಳನ್ನು ಸಂರಕ್ಷಿಸುವುದು ಅತ್ಯಗತ್ಯ ಎನ್ನುವುದು ಅವರ ಸಲಹೆಯಾಗಿದೆ. ಜಲಾಶಯದ ದಂಡೆ ಮೇಲಿರುವ ಡಜನ್‌ಗಟ್ಟಲೆ ಕಾರ್ಖಾನೆಗಳನ್ನು ಬಂದ್ ಮಾಡಬೇಕಿದೆ. ರಾಸಾಯನಿಕ ಪದಾರ್ಥಗಳು ಜಲಾಶಯದ ಪಾತ್ರ ಸೇರದಂತೆ ತಡೆಗಟ್ಟಬೇಕಿದೆ ಎಂಬ ಸಂಗತಿಗಳ ಕಡೆಗೆ ಅವರು ಬೊಟ್ಟು ಮಾಡುತ್ತಾರೆ.

'ನಿತ್ಯ ನೂರಾರು ಲಾರಿಗಳು ಈ ಕೆರೆಗೆ ಕಟ್ಟಡ ತ್ಯಾಜ್ಯ ತಂದು ಸುರಿಯುತ್ತಿವೆ' ಎಂದು ಹೆಸರು ಹೇಳಲಿಚ್ಛಿಸದ ಸ್ಥಳೀಯ ನಿವಾಸಿಯೊಬ್ಬರು ಹೇಳುತ್ತಾರೆ. ಭೂಗಳ್ಳರಿಂದ ಕೆರೆಗಳ ರಕ್ಷಣೆ ಮಾಡದಂತೆ ಅಧಿಕಾರಿಗಳ ಕೈಕಟ್ಟಲಾಗಿದೆ ಎಂಬ ದೂರುಗಳೂ ವ್ಯಾಪಕವಾಗಿವೆ. 'ಇಬ್ಬಲೂರು ಕೆರೆ ಅತಿಕ್ರಮಣ ತೆರವುಗೊಳಿಸಲು ಮುಂದಾದಾಗ ಮೇಲಿನವರಿಂದ ದೂರವಾಣಿ ಕರೆ ಬಂದು ವಾಪಸು ಬರಬೇಕಾಯಿತು' ಎಂದು ಅಧಿಕಾರಿಯೊಬ್ಬರು ವಿವರಿಸುತ್ತಾರೆ.

ಈ ಪ್ರಕರಣದ ಮೇಲೆ ಸಾಮಾಜಿಕ ಚಳವಳಿಗಾರ ಎಸ್.ಆರ್. ಹಿರೇಮಠ ಕೆಲವು ವಾರಗಳ ಹಿಂದಷ್ಟೇ ಇನ್ನಷ್ಟು ಬೆಳಕು ಚೆಲ್ಲಿದ್ದಾರೆ. 'ಅತಿಕ್ರಮಣ ತೆರವುಗೊಳಿಸದಂತೆ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದ್ದು ಇಂಧನ ಸಚಿವ ಡಿ.ಕೆ. ಶಿವಕುಮಾರ್' ಎಂದು ಅವರು ಹೇಳಿದ್ದಾರೆ. ಒಂದೊಮ್ಮೆ ಸಾವಿರ ಕೆರೆಗಳ ತಾಣ ಎನಿಸಿದ್ದ ಬೆಂಗಳೂರಿನಲ್ಲಿ ಈಗ ಸಾವಿರ ಅಡಿಯಷ್ಟು ಆಳಕ್ಕೆ ಭೂಮಿ ಕೊರೆದರೂ ನೀರು ಸಿಗುತ್ತಿಲ್ಲ.

ಸದ್ಯ ಬೆಂಗಳೂರಿನಲ್ಲಿ 104 ಕೆರೆಗಳಿವೆ. ಬಿಬಿಎಂಪಿ, ಬಿಡಿಎ, ಕೆರೆ ಅಭಿವೃದ್ಧಿ ಪ್ರಾಧಿಕಾರ, ಸಣ್ಣ ನೀರಾವರಿ ಇಲಾಖೆ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮದ ಸುಪರ್ದಿಯಲ್ಲಿ ಅವುಗಳಿವೆ. ಈ ಇಲಾಖೆಗಳ ನಡುವಿನ ಸಮನ್ವಯದ ಕೊರತೆಯಿಂದ ಕೆರೆಗಳೆಲ್ಲ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಕೆ.ಆರ್.ಪುರದಲ್ಲಿ ಹೆಚ್ಚಿನ ಸಂಖ್ಯೆ ಕೆರೆಗಳಿದ್ದವು. ಕಾಣೆಯಾದ ಕೆರೆಗಳ ಸಂಖ್ಯೆಯಲ್ಲೂ ಮುಂದಿರುವ ಈ ಭಾಗದಲ್ಲಿ ಅಂತರ್ಜಲ ಪಾತಾಳ ಕಂಡಿದೆ.

ಬಹುತೇಕ ಕೆರೆಗಳು ಕೊಳಚೆ ನೀರಿನ ಸಂಗ್ರಹಾಗಾರವಾಗಿ ಮಾರ್ಪಟ್ಟಿವೆ. ನೈಸರ್ಗಿಕವಾದ ಮಳೆನೀರಿನ ಕಾಲುವೆಗಳು ಚರಂಡಿಯಾಗಿವೆ. ಈ ಚರಂಡಿಗಳು ನೇರವಾಗಿ ವೃಷಭಾವತಿ ಮತ್ತು ಅರ್ಕಾವತಿಗೆ ಸಂಪರ್ಕ ಹೊಂದಿದ್ದು, ಅದೇ ಮಲಿನ ನೀರು ಮುಂದೆ ಕಾವೇರಿಯನ್ನು ಸೇರುತ್ತಿದೆ. ಅದಕ್ಕೇ ಕಾವೇರಿ 'ದಕ್ಷಿಣದ ಗಂಗೆ' ಆಗಿದ್ದಾಳೆ!

...ಒಂದನೇ ಪುಟದಿಂದ

..ಮೂವರ ಸಾವು

ಬೆಂಗಳೂರು ವರದಿ: ಅಪಘಾತದಲ್ಲಿ ಗಾಯಗೊಂಡಿರುವ ಪವನ್ ಹುಣಸಮಾರನಹಳ್ಳಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಎಂಬಿಎ ವ್ಯಾಸಂಗ ಮಾಡುತ್ತಿದ್ದಾರೆ. ಘಟನೆಯಲ್ಲಿ ಅವರ ಎಡಗಾಲು ಮುರಿದಿದ್ದು, ಪ್ರಾಣಕ್ಕೆ ಯಾವುದೇ ಅಪಾಯವಿಲ್ಲ. ಕ್ಯಾಬ್ ಚಾಲಕನಾದ ಶರತ್‌ಗೆ ಮಿದುಳಿಗೆ ಪೆಟ್ಟು ಬಿದ್ದಿರುವುದರಿಂದ ಅವರ ಸ್ಥಿತಿ ಗಂಭೀರವಾಗಿದೆ. ಸದ್ಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದಾರೆ.

'ಘಟನೆ ವೇಳೆ ಕಾರಿನ ಹಿಂದಿನ ಸೀಟಿನಲ್ಲಿ ಮಲಗಿದ್ದೆ. ಕಾರು ಮೇಲ್ಸೇತುವೆ ತಡೆಗೋಡೆಗೆ ಡಿಕ್ಕಿ ಹೊಡೆಯುತ್ತಿದ್ದಂತೆ ಎಚ್ಚರವಾಯಿತು. ನಂತರ ಕಾರು ಮೇಲ್ಸೇತುವೆಯಿಂದ ಸರ್ವಿಸ್ ರಸ್ತೆಗೆ ಉರುಳಿತು' ಎಂದು ಮಗ ಹೇಳಿದ್ದಾಗಿ ಪವನ್ ಪೋಷಕರು ತಿಳಿಸಿದರು.

'ಲೋಕಸಭೆ ಚುನಾವಣೆಗೆ ಗುರುವಾರ ಮತಚಲಾಯಿಸಿ, ಅದೇ ದಿನ ರಾತ್ರಿ ಸ್ನೇಹಿತರೆಲ್ಲ ಮುರುಡೇಶ್ವರಕ್ಕೆ ಹೋಗಿದ್ದರು. ವಾಪಸ್ ಬರುವಾಗ ಈ ಅಪಘಾತ ಸಂಭವಿಸಿದೆ. ಶುಕ್ರವಾರ ರಾತ್ರಿ 11 ಗಂಟೆಗೆ ತಾಯಿಗೆ ಕರೆ ಮಾಡಿದ್ದ ಪವನ್, ಚಿತ್ರದುರ್ಗದಲ್ಲಿ ಊಟ ಮಾಡುತ್ತಿರುವುದಾಗಿ ಹೇಳಿದ್ದ. ಬೆಳಿಗ್ಗೆ 3.30ಕ್ಕೆ ಪುನಃ ಕರೆ ಮಾಡಿದ ಆತ, ಅಪಘಾತ ಸಂಭವಿಸಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾಗಿ ಹೇಳಿದ' ಎಂದು ಪವನ್ ತಂದೆ ನಾಗರಾಜ್ ದುಃಖತಪ್ತರಾಗಿ ನುಡಿದರು.

..ಬೆಲೆ ಏರಿಕೆ ಕಂಗಾಲು

ಯೋಚಿಸಿ ತಿನ್ನುವ ಕಾಲ

ನಿತ್ಯ ವಸ್ತುಗಳ ಬೆಲೆ ಏರುತ್ತಿದೆ. ಇತ್ತೀಚೆಗೆ ಸ್ವಲ್ಪ ದಿನಗಳ ಹಿಂದೆ ಈರುಳ್ಳಿ ದರ ಹೆಚ್ಚಾಗಿತ್ತು. ಆದರೆ, ಈಗ ಎಲ್ಲ ತರಕಾರಿಗಳ ದರವೂ ಹೆಚ್ಚಾಗಿದೆ. ನಮ್ಮಂತಹ ಮಧ್ಯಮ ವರ್ಗದವರ ಮೇಲೆಯೇ ಹೊಡೆತ ಜಾಸ್ತಿ. ಮಧ್ಯಮರ್ಗದವರು ಯೋಚಿಸಿ ತಿನ್ನುವ ಕಾಲ.

–ಹಂಸವೇಣಿ, ಗೃಹಿಣಿ ಬಸವೇಶ್ವರನಗರ

ಕ್ರಮ ಕೈಗೊಳ್ಳಬೇಕು

ತರಕಾರಿ ಕೊಳ್ಳಲು ಆಗದಷ್ಟು ಬೆಲೆ ಹೆಚ್ಚಳ ವಾಗಿದೆ. ರೈತರಿಗೆ ಸಿಗುವ ಬೆಲೆ ಕೂಡ ಕಡಿಮೆ. ಆದರೆ ಮಧ್ಯವರ್ತಿ ವ್ಯಾಪಾರಿಗಳು ಲಾಭ ಮಾಡಿಕೊಳ್ಳುತ್ತಿದ್ದಾರೆ. ತರಕಾರಿ ದರವನ್ನು ತಡೆಯಲು ಕ್ರಮ ಕೈಗೊಳ್ಳಬೇಕು.

–ಕುಮಾರ್, ಗ್ರಾಹಕ, ಹಲಸೂರು

ಗ್ರಾಹಕರ ಕೋಪ

ತರಕಾರಿ ದರ ಹೆಚ್ಚಾಗಿದೆ. ಕೊಳ್ಳಲು ಬಂದ ಗ್ರಾಹಕರು ದರವನ್ನು ಕೇಳಿ, ನಾವು ಸುಳ್ಳು ಹೇಳುತ್ತಿದ್ದೇವೆ ಎಂದು ನಮ್ಮ ಮೇಲೆ ಕೋಪಿಸಿಕೊಂಡು ಹೋಗುತ್ತಾರೆ. ದರ ಇಷ್ಟು ಹೆಚ್ಚಾಗಿದೆ ಎಂದರೆ ಅವರು ನಂಬುವುದಿಲ್ಲ.

– ಪುಟ್ಟಣ್ಣ, ತರಕಾರಿ ವ್ಯಾಪಾರಿ, ಮಲ್ಲೇಶ್ವರ

ಸಮೃದ್ಧಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್
ಯಲಹಂಕ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು–560 064
SAMRUDDHI
ರಿ.ನಂ. ಡಿಆರ್‌ಬಿ–ಎನ್/ಸಿಬ್ಬಂದಿ/148/ಆರ್.ಜಿ.ಎನ್/11135/2013–14

ಪ್ರಕಟಣೆ

ಪ್ರಿಯ ಗ್ರಾಹಕರಿಗೆ ಹಾಗೂ ಷೇರುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ದಿನಾಂಕ 20.04.2014, ಭಾನುವಾರದಂದು ಸಮಯ 10.30ಕ್ಕೆ ಸ್ಥಳ: ಕಂಟ್ರಿ ಕ್ಲಬ್ ಸಭಾಂಗಣ, ಬಾಗಲೂರು, ಯಲಹಂಕ, ಇಲ್ಲಿ ತುರ್ತು ಸರ್ವಸದಸ್ಯರ ಸಭೆಯನ್ನು ವಿ. ಮಂಜುನಾಥ್, ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ಮುಂದಿನ ಕಾರ್ಯವ್ಯಾಪ್ತಿ ಹಾಗೂ ಮುಂದಿನ ಬೆಳವಣಿಗೆಗಳ ಬಗ್ಗೆ ಕುರಿತು ಸಭೆಯನ್ನು ಕರೆಯಲಾಗಿದೆ. ದಯವಿಟ್ಟು ಮಾಹಿತಿ ತಲುಪದೇ ಇರುವ ಷೇರುದಾರರಿಗೆ ಈ ಪ್ರಕಟಣೆಯ ಮೂಲಕ ಸಭೆಗೆ ಹಾಜರಾಗಬೇಕೆಂದು ಮನವಿ ಮಾಡುತ್ತೇನೆ.

ಸಹಿ/– ವಿ. ಮಂಜುನಾಥ್
ಸಮೃದ್ಧಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟಡ್

ಶಾಲಾ ಮಕ್ಕಳಿಗಾಗಿ ಚಿತ್ರ ಬಿಡಿಸುವ ಸ್ಪರ್ಧೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯು ವಿಶ್ವ ಪುಸ್ತಕ ದಿನಾಚರಣೆ ಮತ್ತು ಕೃತಿ ಸ್ವಾಮ್ಯ ದಿನಾಚರಣೆ ಆಚರಣೆ ಅಂಗವಾಗಿ ಶಾಲಾ ಮಕ್ಕಳಲ್ಲಿ ಪುಸ್ತಕ ಓದುವ ಅಭಿರುಚಿ ಹೆಚ್ಚಿಸಲು ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆಯನ್ನು ಇದೇ 23ರಂದು ನಗರ ಕೇಂದ್ರ ಗ್ರಂಥಾಲಯದಲ್ಲಿ ಹಮ್ಮಿಕೊಂಡಿದೆ.

ಬೆಳಿಗ್ಗೆ 11ಕ್ಕೆ 'ಚಿತ್ರ ಬಿಡಿಸುವ ಸ್ಪರ್ಧೆ' ಹಾಗೂ ಮಧ್ಯಾಹ್ನ 12ಕ್ಕೆ 'ಮಕ್ಕಳ ಜ್ಞಾನ ಸಂಪಾದನೆಯಲ್ಲಿ ಗ್ರಂಥಾಲಯಗಳ ಪಾತ್ರ' ಕುರಿತು ಪ್ರಬಂಧ ಸ್ಪರ್ಧೆ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಸಂಪರ್ಕಕ್ಕೆ: 2224 0920.

'ಉತ್ತಮ ಜೀವನಕ್ಕೆ ಅಂತರಂಗದ ಶಿಕ್ಷಣ ಅಗತ್ಯ'

ಪ್ರಜಾವಾಣಿ ವಾರ್ತೆ

ಯಲಹಂಕ: 'ಆಧುನಿಕ ತಂತ್ರಜ್ಞಾನದ ವಿವಿಧ ಮೂಲಗಳಿಂದ ಮನುಷ್ಯ ಹೆಚ್ಚಿನ ಸಂಪಾದನೆಯ ಜೊತೆಗೆ ತನಗೆ ಅಗತ್ಯವಿರುವ ಎಲ್ಲ ಸೌಲಭ್ಯ ಗಳನ್ನು ಪಡೆಯುತ್ತಿದ್ದರೂ ಉತ್ತಮ ಜೀವನವನ್ನು ನಡೆಸಲು ಬೇಕಾದ ಅಂತರಂಗ ಶಿಕ್ಷಣ ದೊರಕುತ್ತಿಲ್ಲ ಎಂದು ಕರ್ನಾಟಕ ಲೋಕಾಯುಕ್ತದ (ಜಾಗೃತದಳ) ಮಾಜಿ ನಿರ್ದೇಶಕ ಡಿ. ಎನ್.ಮುನಿಕೃಷ್ಣ ವಿಷಾದಿಸಿದರು.

ಅಮೃತಹಳ್ಳಿ ಗೋವಿಂದಪ್ಪ ಬಡಾವಣೆಯ ಶ್ರೀರಾಮ ದೇವಾಲಯದಲ್ಲಿ ಆರನೇ ವರ್ಷದ ಶ್ರೀರಾಮನವಮಿ ಮಹೋತ್ಸವದ ಅಂಗವಾಗಿ ಸಂಗೀತ, ಸಾಹಿತ್ಯ ಹಾಗೂ ಇತರೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ವಿ ದ್ವಾಂಸರಿಗಾಗಿ ಆಯೋಜಿಸಿದ್ದ ಸನ್ಮಾನ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

'ಸಾಹಿತ್ಯ, ಸಂಗೀತ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಮುಖಾಂತರ ಅಂತರಂಗ ಶಿಕ್ಷಣ ದೊರಕಬೇಕಾಗಿದೆ. ಈ ನಿಟ್ಟಿನಲ್ಲಿ ಇಂತಹ ಕ್ಷೇತ್ರಗಳ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಬೇಕಾದ ಅಗತ್ಯವಿದೆ' ಎಂದು ತಿಳಿಸಿದರು.

ವಿದುಷಿ ಕಮಲಾ ವೈದ್ಯ ನಾಥನ್, ವಿದ್ವಾನ್‌ಗಳಾದ ಎ.ಆರ್.ಕೃಷ್ಣಮೂರ್ತಿ, ಸಿ.ಚಲುವರಾಜ್, ರಾಜಾರಾವ್, ಜಯರಾಮರಾವ್, ಕವಿ ಬಿ. ಆರ್.ಲಕ್ಷ್ಮಣರಾವ್ ಅವರನ್ನು ಸನ್ಮಾನಿಸಲಾಯಿತು. ಸಂಗೀತ ವಿದ್ವಾನ್ ಚಿಂತಲಪಲ್ಲಿ ಡಾ.ಕೆ.ರಮೇಶ್, ಮೃದಂಗ ವಿದ್ವಾನ್ ಟಿ.ಎಸ್.ಚಂದ್ರಶೇಖರ್, ಗಮಕ ವಿದ್ವಾನ್ ಜಯರಾಮರಾವ್, ಅಮ್ಮ ಫೌಂಡೇಶನ್ ಹೆಲ್ಪ್ ಅಂಡ್ ಗ್ರೋ ಸಂಸ್ಥೆಯ ಅಧ್ಯಕ್ಷ ವಿ.ಕೆ.ರೋಹಿತ್ ಉಪಸ್ಥಿತರಿದ್ದರು.

ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಅಮೃತಹಳ್ಳಿಯ ಶ್ರೀರಾಮ ದೇವಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಗೀತ, ಸಾಹಿತ್ಯ ಹಾಗೂ ಇತರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಸಾಧಕರನ್ನು ಸನ್ಮಾನಿಸಲಾಯಿತು. ಶ್ರೀರಾಮ ಸೇವಾ ಪ್ರತಿಷ್ಠಾನ ಟ್ರಸ್ಟ್‌ನ ಸಂಸ್ಥಾಪಕ ಎಂ.ಕೋದಂಡರಾಮ್ ಇತರರು ಇದ್ದಾರೆ

ಯಲಹಂಕದ ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ತಾಂತ್ರಿಕ ಮತ್ತು ಸಾಂಸ್ಕೃತಿಕ ವಾರ್ಷಿಕ ಹಬ್ಬ 'ಉತ್ಸಾಹ–2014' ಸಮಾರಂಭದಲ್ಲಿ ವಿದ್ಯಾರ್ಥಿನಿಯರು ನೃತ್ಯ ಪ್ರದರ್ಶನ ನೀಡಿದರು

ಸಾಂಸ್ಕೃತಿಕ ಸ್ಪರ್ಧೆ: ಪ್ರತಿಭೆಗಳ ಅನಾವರಣ

ಪ್ರಜಾವಾಣಿ ವಾರ್ತೆ

ಯಲಹಂಕ: 'ವಿದ್ಯಾರ್ಥಿಗಳಲ್ಲಿ ಅಡಗಿರುವ ಆಂತರಿಕ ಪ್ರತಿಭೆಯನ್ನು ಹೊರತರಲು ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳು ಅತ್ಯವಶ್ಯಕ' ಎಂದು ಬಿಎಂಎಸ್ ಶಿಕ್ಷಣ ಸಂಸ್ಥೆಯ ಟ್ರಸ್ಟಿ ಡಾ.ರಾಗಿಣಿ ನಾರಾಯಣ್ ಹೇಳಿದರು.

ಆವಲಹಳ್ಳಿಯ ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ತಾಂತ್ರಿಕ ಮತ್ತು ಸಾಂಸ್ಕೃತಿಕ ವಾರ್ಷಿಕಹಬ್ಬ 'ಉತ್ಸಾಹ–2014' ಎರಡುದಿನಗಳ ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಟ್ರಸ್ಟಿ ಪಿ.ದಯಾನಂದ ಪೈ, ಕಾಗ್ನಿಝಾಂಟ್ ಟೆಕ್ನಾಲಜಿ ಸೆಲ್ಯೂಷನ್ ಸಂಸ್ಥೆಯ ಯೋಜನಾ ನಿರ್ದೇಶಕ ಗೌತಮ್ ಚಟರ್ಜಿ, ನಟ ಶ್ರೀನಗರ ಕಿಟ್ಟಿ, ನಟಿ ಪವಿತ್ರಾಗೌಡ ಇದ್ದರು.

'ಜಾನಪದ ಕ್ಷೇತ್ರಕ್ಕೆ ನಾಗೇಗೌಡರ ಸೇವೆ ಅಪಾರ'

ಪ್ರಜಾವಾಣಿ ವಾರ್ತೆ

ರಾಮನಗರ: 'ನಾಗೇಗೌಡ ಅವರು ಕನ್ನಡ ನಾಡು ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ' ಎಂದು ರಂಗ ನಿರ್ದೇಶಕ ಬೈರ್ನಳ್ಳಿ ಶಿವರಾಂ ತಿಳಿಸಿದರು.

ಜಾನಪದ ಲೋಕದಲ್ಲಿ ಅಕ್ಷರ ಧಾಮ ಟ್ರಸ್ಟ್, ಮಾಯ್ಕಾರ ರಂಗತಂಡ, ಕರ್ನಾಟಕ ಜಾನಪದ ಪರಿಷತ್ತಿನ ಸಹಯೋಗದಲ್ಲಿ ಶನಿವಾರ ನಡೆದ ಮಕ್ಕಳ ಶಿಬಿರದಲ್ಲಿ 'ನಾಡೋಜ ಎಚ್.ಎಲ್.ನಾಗೇಗೌಡ ಹಾಗೂ ಅವರ ಸಾಧನೆ' ಕುರಿತು ಅವರು ಮಾತನಾಡಿದರು.

'ಕನ್ನಡ ಸಾಹಿತ್ಯ ಮತ್ತು ಜಾನಪದ ಕ್ಷೇತ್ರದಲ್ಲಿ ಅವರು ಅಪಾರ ಆಸಕ್ತಿ ಹೊಂದಿದ್ದರು' ಎಂದರು.

ಶಿಬಿರದ ನಿರ್ದೇಶಕ ನರೇಶ್ ಮಯ್ಯ ನಾಗೇಗೌಡ ಮಾತನಾಡಿ, 'ನಾಗೇಗೌಡ ಅವರು ನಿರ್ಮಿಸಿರುವ ಜಾನಪದ ಲೋಕ ದೇಶದ ಅತ್ಯಂತ ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಿ ಇದು ರೂಪುಗೊಂಡಿದೆ' ಎಂದರು.

ಶಿಬಿರದ ನಿರ್ದೇಶಕ ಶಿವಣ್ಣ ಕನಕಪುರ, ರಂಗನಿರ್ದೇಶಕ ಎಂ.ಸಿ.ನಾಗರಾಜು, ಸಂಪನ್ಮೂಲ ವ್ಯಕ್ತಿಗಳಾದ ನೀನಾಸಂ ರತ್ನಾ, ಮಂಜುಳಾ, ಗಾಯಕರಾದ ಸರ್ವೋತ್ತಮ್, ಬ್ಯಾಡರಹಳ್ಳಿ ಶಿವಕುಮಾರ್ ಇದ್ದರು.

'ಕಲೆಗೆ ಪ್ರೋತ್ಸಾಹ ಅಗತ್ಯ'

ಕನಕಪುರ: 'ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಕಲೆ ಇರುತ್ತದೆ. ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವಾಗಬೇಕು' ಎಂದು ನೀನಾಸಂ ರಂಗ ನಿರ್ದೇಶಕ ಎಂ.ಸಿ.ನಾಗರಾಜು ತಿಳಿಸಿದರು.

ಪಟ್ಟಣದ ಕೋಟೆ ಶ್ರೀರಾಮ ಮಂದಿರದಲ್ಲಿ ವಿನಾಯಕ ನೃತ್ಯ ಶಾಲೆಯ ವತಿಯಿಂದ ಆಯೋಜಿಸಿದ್ದ ಒಂಬತ್ತನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.